# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1009** |
| **ಸದಸ್ಯರ ಹೆಸರು** | : | **ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **25.08.2026** |
| **ಉತ್ತರಿಸುವ ಸಚಿವರು** | : | **ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ 13 ಮೀನುಗಾರಿಕಾ ಬಂದರುಗಳಲ್ಲಿ ಹೂಳೆತ್ತುವಿಕೆ ಯೋಜನೆಯ ಪ್ರಸ್ತುತ ಹಂತವೇನು; ಈ ಯೋಜನೆಗೆ ಎಷ್ಟು ಅನುದಾನ ಮೀಸಲಿಡಲಾಗಿತ್ತು; ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; | ರಾಜ್ಯದಲ್ಲಿ 11 ಮೀನುಗಾರಿಕೆ ಬಂದರುಗಳು ಮತ್ತು 13 ಮೀನು ಇಳಿದಾಣ ಕೇಂದ್ರಗಳಿರುತ್ತವೆ. 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-64 ರಲ್ಲಿ ರಾಜ್ಯದ 8 ಮೀನುಗಾರಿಕೆ ಬಂದುರಗಳಲ್ಲಿ ಮೀನುಗಾರಿಕಾ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇಷನ್ ಚಾನಲ್‌ಗಳಲ್ಲಿ ಹಂತ ಹಂತವಾಗಿ ಹೊಳೆತ್ತಲಾಗುವುದು ಎಂದು ಘೋಷಿಸಲಾಗಿದೆ. ಅದರಂತೆ, ಈ ಕೆಳಕಂಡ ಬಂದರುಗಳಲ್ಲಿ ಹೊಳೆತ್ತುವ ಕಾಮಗಾರಿಗಳನ್ನು ರೂ.2000.00 ಲಕ್ಷ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಸದರಿ ಕಾಮಗಾರಿಗಳಿಗೆ ರೂ.16,83,61,000/- ರಷ್ಟು ಅನುದಾನವನ್ನು ಬಿಡುಗಡೆಗೊಳಿಸಿದ್ದು, ಇಲ್ಲಿಯವರೆಗೆ ಒಟ್ಟು ರೂ.14,82,68,000/-ಗಳು ಖರ್ಚಾಗಿರುತ್ತದೆ ವಿವರಗಳು ಕೆಳಗಿನಂತಿದೆ. |

| ಕ್ರ.ಸ | ಮೀನುಗಾರಿಕೆ ಬಂದರು | ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|
| 1 | ಮಂಗಳೂರು | 323.53 |
| 2 | ಮಲ್ಪೆ | 265.93 |
| 3 | ಗಂಗೊಳ್ಳಿ | 372.92 |
| 4 | ಭಟ್ಕಳ | 286.66 |
| 5 | ಕಾರವಾರ | 179.64 |

2023-24 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ತು ಸಂಪದ (PMMSY) ಯೋಜನೆಯಡಿ ಈ ಕೆಳಗಿನ ಬಂದರುಗಳಲ್ಲಿ ಡ್ರೆಡ್ಜಿಂಗ್ ಕೈಗೊಳ್ಳಲು ಅನುಮೋದನೆ ನೀಡಿದ್ದು ರೂ.1240.67 ಲಕ್ಷ ಅನುದಾನ ಮೀಸಲಿಡಲಾಗಿದೆ . ವಿವರ ಕಳಕಂಡಂತಿದೆ.

| ಕ್ರ.ಸ | ಮೀನುಗಾರಿಕೆ ಬಂದರು | ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|
| 1 | ಅಮದಳ್ಳಿ | 561.00 |
| 2 | ಬೇಲಿಕೇರಿ- ಹಾರವಾಡ | 414.08 |
| 3 | ತದಡಿ | 265.59 |

| | | |
|---|---|---|
| | | 2024-25 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-249 ರಲ್ಲಿ ಮೀನುಗಾರಿಕಾ ದೋಣಿಗಳು ತಂಗುವ ಜೆಟ್ಟಿಗಳು ಹಾಗೂ ಬಂದರುಗಳಲ್ಲಿ ಹೂಳು ತೆಗೆಯುವುದು ಮತ್ತು ಮಲ್ಪೆ ಹೊನ್ನಾವರ, ಭಟ್ಕಳ, ಕುಂದಾಪುರ ಮತ್ತು ಬೇಲಿಕೇರಿ ಬಂದರುಗಳಲ್ಲಿ ಎರಡು ವರ್ಷಗಳಿಗೊಮ್ಮೆ ಹೊಳೆತ್ತುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಘೋಷಿಸಲಾಗಿದೆ.<br><br>ಆಯವ್ಯಯ ಭಾಷಣದಲ್ಲಿ ಮಾಡಿರುವ ಘೋಷಣೆಯಂತೆ ವಿವಿಧ ಬಂದರು ಪ್ರದೇಶಗಳಲ್ಲಿ ಹೊಳೆತ್ತುವ ಬಗ್ಗೆ ಪೂರ್ವ ಬ್ಯಾತಿಮೆಟ್ರಿಕ್ ಸರ್ವೆಯನ್ನು ರೂ.69.32 ಲಕ್ಷಗಳ ವೆಚ್ಚದಲ್ಲಿ ನಡೆಸಲಾಗಿದ್ದು, ಒಟ್ಟು 13 ಸ್ಥಳಗಳಲ್ಲಿ ಡ್ರೆಡ್ಜಿಂಗ್ ಕೈಗೊಳ್ಳಲು ರೂ.6788.00 ಲಕ್ಷಗಳ ಅನುದಾನ ಅಂದಾಜಿಸಲಾಗಿದೆ. |
| ಆ) | ಕರಾವಳಿ ಪ್ರದೇಶದಲ್ಲಿ ಒಳನಾಡು ನೀರಿನ ನಿರ್ವಹಣೆ ಮತ್ತು ಸಾರಿಗೆಯನ್ನು ಸುಧಾರಿಸಲು "ಪಶ್ಚಿಮ ವಾಹಿನಿ" ಯೋಜನೆಗೆ ಸರ್ಕಾರ ಹೆಚ್ಚುವರಿ ಅನುದಾನವನ್ನು ಈ ಆಯವ್ಯಯದಲ್ಲಿ ಕೋರಿದೆಯೇ; | ಕರ್ನಾಟಕ ಜಲಸಾರಿಗೆ ಮಂಡಳಿಯಿಂದ ಪಶ್ಚಿಮ ವಾಹಿನಿ ಯೋಜನೆಯಡಿ ಪ್ರಸ್ತುತ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |
| ಇ) | ನೇತ್ರಾವತಿ ಮತ್ತು ಗುರುಪುರ ಹಿನ್ನೀರಿನಲ್ಲಿ 17 ನಿಲ್ದಾಣಗಳನ್ನು ಒಳಗೊಂಡ 30 ಕಿ.ಮೀ. ಉದ್ದದ ಮತ್ತು ಸುಮಾರು 2500 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಯೋಜಿಸಿರುವ ರಾಜ್ಯದ ಮೊದಲ ವಾಟರ್ ಮೆಟ್ರೋ ಯೋಜನೆಯ ಪ್ರಸ್ತುತ ಹಂತವೇನು? (ಮಾಹಿತಿ ನೀಡುವುದು) | 2024-25ನೇ ಆರ್ಥಿಕ ವರ್ಷದ ಬಜೆಟ್ ಕಂಡಿಕೆ 307ರ ಅಡಿಯಲ್ಲಿ ಮಂಗಳೂರು ವಾಟರ್ ಮೆಟ್ರೋ ಯೋಜನೆಯನ್ನು ಘೋಷಿಸಲಾಗಿರುತ್ತದೆ.<br><br>ಯೋಜನೆಯ ಕಾರ್ಯಸಾಧ್ಯತಾ ಅಧ್ಯಯನವನ್ನು (Feasibility Study) ಕೈಗೊಳ್ಳಲು ಮತ್ತು ವಹಿವಾಟು ಸಲಹಾ ಬೆಂಬಲವನ್ನು ಒದಗಿಸಲು ವಹಿವಾಟು ಸಲಹೆಗಾರರನ್ನು (Transaction Advisor) ನೇಮಿಸಿದ್ದು, ಅವರು ನೀಡಿರುವ ಕಾರ್ಯಸಾಧ್ಯತಾ ಮೌಲ್ಯಮಾಪನದ ಆಧಾರದ ಮೇಲೆ, ಯೋಜನೆಯ ಅಂದಾಜು ವೆಚ್ಚವು ಸುಮಾರು ₹200 ಕೋಟಿಗಳಾಗಿವೆ. ಗುರುಪುರ-ನೇತ್ರಾವತಿ ನದಿಯ ಮಾರ್ಗದಲ್ಲಿ ವಾಟರ್ ಮೆಟ್ರೋವನ್ನು ಪ್ರಸ್ತಾಪಿಸಲಾಗಿದ್ದು, ಈ ಯೋಜನೆಯು ಮಂಗಳೂರು ವಿಮಾನ ನಿಲ್ದಾಣವನ್ನು ಉಳ್ಳಾಲ-ಕೋಟೆಪುರಕ್ಕೆ ಸಂಪರ್ಕಿಸುತ್ತದೆ. ಈ ಯೋಜನೆಗೆ ಪ್ರಾಥಮಿಕವಾಗಿ 8 ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. |

**IDD 97 PSP 2026**

**(ಕೆ.ಎಸ್. ಬಸವಂತಪ್ಪ)**
**ಮುಜರಾಯಿ, ಮೀನುಗಾರಿಕೆ, ಬಂದರು**
**ಮತ್ತು ಒಳನಾಡು ಜಲಸಾರಿಗೆ ಸಚಿವರು**